(ಗ್ರೋಸರಿ ಷಾಪ್), ನಮ್ಮಲ್ಲಿ ಕೆಲಸ ಮಾಡಿರುವವರಿಗೆ 5–5 ಕೆ.ಜಿ. ಅಕ್ಕಿ ಕೊಡುತ್ತಾರೆ. ಅದನ್ನು ತೆಗೆದುಕೊಂಡವರು, ಒಂದು ಮನೆಯಲ್ಲಿ ಅಕಸ್ಮಾತ್ 3 ಜನ ಕೆಲಸಕ್ಕೆ ಹೋಗಿದ್ದರು. 3 ದಿವಸ ಮಾಡಿದ್ದರು, ಅವರಿಗೆ 45 ಕೆಜಿಯಷ್ಟು ಅಕ್ಕಿ ಬರುತ್ತದೆ. ನಮ್ಮ ಭಾಗದಲ್ಲಿ ಜೋಳ ಬಳಸುತ್ತಾರೆ. ಈ ಭಾಗದಲ್ಲಿ ರಾಗಿ ಬಳಸುತ್ತಾರೆ. ಅವರಿಗೆ ಉಪ್ಪು, ಮೆಣಸಿನಕಾಯಿ ಬೇಕಾಗಿರುತ್ತದೆ, ಬೇರೆ ಸ್ವರೂಪದ ಅಗತ್ಯತೆಗಳು ಬೇಕಾಗಿರುತ್ತದೆ. ಆದುದರಿಂದ, ಲೈಸೆನ್ಸ್‌ಡ್ ಷಾಪ್‌ನವರು ಅದನ್ನು ಕೊಡಿ ಎನ್ನುವ ರೀತಿಯಲ್ಲಿ ಮಹಾರಾಷ್ಟ್ರದಲ್ಲಿ ಒಂದು ಪದ್ಧತಿ ಇದೆ ಎನ್ನುವ ಮಾತನ್ನು ಹೇಳಿದ್ದಾರೆ. ನಿಯಮ 73ರ ಇವೆಲ್ಲವನ್ನೂ ಚರ್ಚೆ ಮಾಡುವುದಕ್ಕಾಗುವುದಿಲ್ಲ. ಆ ಕಾರಣಕ್ಕಾಗಿ ಸ್ಪಷ್ಟೀಕರಣ ಕೇಳಿದ್ದಕ್ಕೆ ನಾನು ಅಷ್ಟಕ್ಕೇ ಸೀಮಿತಗೊಳಿಸಿದ್ದೇನೆ. ನಮ್ಮವರು ಈ ಪ್ರಶ್ನೆ ಕೇಳಿದ್ದರಿಂದ ವಿವರವಾಗಿ ನಾನು ಉತ್ತರಿಸಿದ್ದೇನೆ. ದಯವಿಟ್ಟು ಮತ್ತೊಂದು ರೂಪದಲ್ಲಿ ಅಧ್ಯಕ್ಷರು ತೆಗೆದುಕೊಳ್ಳವುದಿದ್ದರೆ, ಆ ವಿಚಾರದಲ್ಲಿ ಕೂಡ ಮುಕ್ತವಾದಂಥ ರೀತಿಯ ನಿಮ್ಮ ಸಲಹೆಗಳ ಆಧಾರದ ಮೇಲೆ, ಕೇಂದ್ರ ಸರ್ಕಾರದ ಸಹಕಾರವನ್ನು ತೆಗೆದುಕೊಂಡು ನಾವು ನಿರ್ಣಯ ಮಾಡುತ್ತೇವೆ.

ಶ್ರೀ ಜಿ.ಟಿ. ದೇವೇಗೌಡ : ಮಾನ್ಯ ಅಧ್ಯಕ್ಷರೆ....

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ನೋಟೀಸ್ ಕೊಟ್ಟಿರುವವರನ್ನು ಬಿಟ್ಟು ಬೇರೆಯವರು ಸ್ಪಷ್ಟೀಕರಣ ಕೇಳುವುದಕ್ಕೆ ಬರುವುದಿಲ್ಲ. ಮಾನ್ಯ ಎ.ಟಿ. ರಾಮಸ್ವಾಮಿಯವರು ಮಾತ್ರ ಮಾಡಬಹುದು.

ಶ್ರೀ ಎಂ.ಪಿ. ಪ್ರಕಾಶ್ : ನಿಯಮ 73ರಲ್ಲಿ ಕ್ಲಿಯರ್ ಆಗಿ ಇದೆ. "ಹೇಳಿಕೆಯನ್ನು ನೀಡಲಾದ ಕಾಲದಲ್ಲಿ ಅಂಥ ಹೇಳಿಕೆಯ ಮೇರೆ ಯಾವ ಚರ್ಚೆಯನ್ನೂ ಮಾಡತಕ್ಕದ್ದಲ್ಲ. ಅದರ ಕಾರ್ಯಕಲಾಪಗಳ ಪಟ್ಟಿಯಲ್ಲಿ ಈ ವಿಷಯವು ಯಾರ ಹೆಸರಿನಲ್ಲಿದೆಯೋ, ಆ ಪ್ರತಿಯೊಬ್ಬ ಸದಸ್ಯರು ವಿಧಾನ ಸಭಾಧ್ಯಕ್ಷರ ಅನುಮತಿಯೊಂದಿಗೆ ಸ್ಪಷ್ಟೀಕರಣ ಕೇಳಬಹುದು. ಎಂದಿದೆ. ಮಾನ್ಯ ಎ.ಟಿ. ರಾಮಸ್ವಾಮಿಯವರು ಮಾತ್ರ ಸ್ಪಷ್ಟೀಕರಣ ಕೇಳಬಹುದು, ತಾವಲ್ಲ. ಅದಕ್ಕಾಗಿ ಬೇರೆ ರೂಪದಲ್ಲಿ ತಾವು ಕೊಡಿ ಎಂದು ನಾನು ಹೇಳಿದ್ದು.

ಶ್ರೀ ಎಂ.ಪಿ. ವೆಂಕಟೇಶ್ : ಅಧ್ಯಕ್ಷರೆ, ಸೋಮವಾರ ಅವಕಾಶ ಕೊಡಿ.

ಅಧ್ಯಕ್ಷರು : ಬೇರೆ ನಿಯಮಗಳ ಅಡಿ ನೋಟೀಸ್ ಕಳುಹಿಸಿಕೊಡಿ. ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ : ಬೇರೆ ರೂಪದಲ್ಲಿ ತಾವೇ ಅದನ್ನು ಪರಿವರ್ತನೆ ಮಾಡಿ ಕೊಡಿ.

ಅಧ್ಯಕ್ಷರು : ಇವತ್ತು ಸಾಧ್ಯವಾಗುವುದಿಲ್ಲ. ಮಾಡಿಕೊಡೋಣ. ಆಯಿತು.

ಶ್ರೀ ಡಿ.ಟಿ. ಜಯಕುಮಾರ್ : ಸೋಮವಾರ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಆಯಿತು.

ಆ) ಬಳ್ಳಾರಿಯನ್ನು ಹೊಸದಾಗಿ ರಚಿಸಲಿರುವ ರಾಯಲ ಸೀಮೆ ರಾಜ್ಯಕ್ಕೆ ಸೇರ್ಪಡೆ ಮಾಡಬೇಕೆಂಬ ವರದಿ ಬಗ್ಗೆ

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಸನ್ಮಾನ್ಯ ಅಧ್ಯಕ್ಷರೇ, ಬಳ್ಳಾರಿಯನ್ನು ಹೊಸದಾಗಿ ರಚಿಸುವ ರಾಯಲ್ ಸೀಮಾಗೆ ಸೇರ್ಪಡೆ ಮಾಡಬೇಕೆಂಬ ವರದಿಯಿಂದ ಉಂಟಾಗಿರುವ ಗೊಂದಲದ ಬಗ್ಗೆ ಮಾನ್ಯ ಸಂಸದೀಯ ಹಾಗೂ ಕಂದಾಯ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

† **ಶ್ರೀ ಎಂ.ಪಿ. ಪ್ರಕಾಶ್(ಸಂಸದೀಯ ವ್ಯವಹಾ ಹಾಗೂ ಕಂದಾಯ ಸಚಿವರು) :** ಮಾನ್ಯ ಅಧ್ಯಕ್ಷರೆ, ಆಂಧ್ರಪ್ರದೇಶದ ತೆಲಂಗಾಣ ಪ್ರಾಂತ್ಯ ಪ್ರತ್ಯೇಕ ರಾಜ್ಯವಾಗುವುದಾದರೆ ತಾವು ಪ್ರತ್ಯೇಕ ರಾಯಲಸೀಮಾ ರಾಜ್ಯಕ್ಕಾಗಿ ಹೋರಾಟ ನಡೆಸುವುದಾಗಿ ಇತ್ತೀಚೆಗೆ ಉದ್ಭವಿಸಿರುವ ವಿವಿಧ ಸಂಘಟನೆಗಳು ಹೇಳಿಕೆ ನೀಡುತ್ತಿರುವುದಾಗಿ ಪತ್ರಿಕೆಗಳ ಮೂಲಕ ತಿಳಿದು ಬಂದಿದೆ. ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಕೆ. ವಿಜಯಭಾಸ್ಕರ ರೆಡ್ಡಿ. ಅವರ ಮಗ ಶ್ರೀ ಸೂರ್ಯಪ್ರಕಾಶ್ ರೆಡ್ಡಿ. ಅವರು ಆಂಧ್ರದ ಕರಾವಳಿ ನೆಲ್ಲೂರು. ಪ್ರಕಾಶ್ ಜಿಲ್ಲೆಗಳೊಂದಿಗೆ ಕರ್ನಾಟಕದ ಬಳ್ಳಾರಿ ಜಿಲ್ಲೆಯನ್ನೂ ಉದ್ದೇಶಿತ ರಾಯಲಸೀಮಾ ರಾಜ್ಯದ ವ್ಯಾಪ್ತಿಗೆ ತರಬೇಕು' ಎಂದು ಹೇಳಿಕೆ ನೀಡಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಬಗ್ಗೆ ಕೇಂದ್ರ ಸರ್ಕಾರದಿಂದಾಗಲೀ ಅಥವಾ ಆಂಧ್ರ ರಾಜ್ಯ ಸರ್ಕಾರದಿಂದಾಗಲೀ ಯಾವುದೇ ಮಾಹಿತಿ ಬಂದಿರುವುದಿಲ್ಲ. ಇದು ಕೆಲವು ಸಂಘಟನೆಗಳ ಮತ್ತು ವ್ಯಕ್ತಿಗಳ ವೈಯಕ್ತಿಕ ಅಭಿಪ್ರಾಯವಾಗಿದೆ ಎಂದು ತಿಳಿದು ಬರುತ್ತದೆ. ಈ ಹೇಳಿಕೆಗೆ ಬಳ್ಳಾರಿ ಜಿಲ್ಲೆಯ ಜನರು ವಿರೋಧ ವ್ಯಕ್ತಪಡಿಸಿ ಅಹವಾಲು ಸಲ್ಲಿಸಿರುವರು.

ಈ ಸರ್ಕಾರವು ರಾಜ್ಯದ ನೆಲ, ಜಲ, ನುಡಿ ಮತ್ತು ಸಂಸ್ಕೃತಿಯನ್ನು ಕಾಪಾಡುವ ಸಂಪೂರ್ಣ ಹೊಣೆಗಾರಿಕೆಯನ್ನು ಹೊಂದಿರುತ್ತದೆ. ಯಾವುದೇ ಕಾರಣಕ್ಕೂ ಮತ್ತು ಯಾವುದೇ ಸಂದರ್ಭದಲ್ಲೂ, ರಾಜ್ಯದ ಯಾವುದೇ ಸ್ಥಳವನ್ನು ಬಿಟ್ಟು ಕೊಡುವುದಿಲ್ಲ. ಎಂಬ ಧೃಡ ನಿಲುವನ್ನು ಈ ಸರ್ಕಾರ ತಳೆದಿದೆ ಎಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

ಮಾನ್ಯ ಅಧ್ಯಕ್ಷರೆ, ರಾಯಲಸೀಮಾ ಭಾಗದಲ್ಲಿ 1953ರಲ್ಲಿ ಕೊಟ್ಟಿ ಶ್ರೀರಾಮುಲುರವರು ಅಮರಣಾಂತ ಉಪವಾಸ ಮಾಡಿದ ಸಂದರ್ಭದಲ್ಲಿ 54ನೇ ದಿವಸದಲ್ಲಿ ಅವರು ತೀರಿಕೊಂಡರು. ಆ ಸಂದರ್ಭದಲ್ಲಿ ಭಾಷಾವಾರು ಪ್ರಾಂತಗಳ ರಚನೆಗೆ ಕೇಂದ್ರ ಸರ್ಕಾರ ಮನಸ್ಸು ಮಾಡಿರಲಿಲ್ಲ. ಆದರೆ, ಆಂಧ್ರದಲ್ಲಿ ವ್ಯಾಪಕವಾಗಿ ಗಲಭೆ, ದೊಂಬಿಗಳು ನಡೆದ ಸಂದರ್ಭದಲ್ಲಿ ಅವತ್ತಿನ ದಿವಸ ಜವಾಹರಲಾಲ್ ನೆಹರೂರವರು ಹೈದರಾಬಾದ್ ಭಾಗವನ್ನು ಬಿಟ್ಟು, ತೆಲಂಗಾಣ ಭಾಗವನ್ನು ಬಿಟ್ಟು, ಮಹಾರಾಷ್ಟ್ರದ ವಿದರ್ಭ ಭಾಗದ ಕೆಲವು ತೆಲುಗು ಮಾತನಾಡುವಂಥ ಪ್ರದೇಶ ಬಿಟ್ಟು, ರಾಯಲಸೀಮಾ ಮತ್ತು ಮದ್ರಾಸ್ ಪ್ರಾಂತಗಳಲ್ಲಿರುವ ಕೆಲವು ಪ್ರದೇಶಗಳನ್ನು ಸೇರಿಸಿಕೊಂಡು, ಸರ್ಕಾರದ ಕೆಲವು ಭಾಗಗಳಲ್ಲಿ ಸೇರಿಸಿಕೊಂಡು, ಒಂದು ತಾತ್ಕಾಲಿಕವಾಗಿರುವ ಆಂಧ್ರಪ್ರದೇಶವನ್ನು 1953ರಲ್ಲಿ ರಚನೆ ಮಾಡಿದರು. ಆಗ ಬಳ್ಳಾರಿ ಜಿಲ್ಲೆಯನ್ನು ಅದಕ್ಕೆ ಸೇರಿಸಬೇಕೆಂದು ಹೇಳಿದಾಗ, ದೊಡ್ಡ ಹೋರಾಟವನ್ನು ಮಾನ್ಯ ಶಿವಮೂರ್ತಿ ಸ್ವಾಮೀಜಿಯವರು, ಅನೇಕ ಹಿರಿಯರು ಅಕರಾನಿ ಪರಿಷತ್ ಎಂದು ಮಾಡಿ, ಹೋರಾಟ ಮಾಡಿದ ಸಂದರ್ಭದಲ್ಲಿ ಬಳ್ಳಾರಿಯನ್ನು ಸೇರಿಸುವುದಿಲ್ಲವೆಂದಾಯಿತು. ಆ ಸಂದರ್ಭದಲ್ಲಿ ಮಾನ್ಯ ಮುಂಡ್ಲೂರು ಗಂಗಪ್ಪ ಎನ್ನುವವರು ಅಲ್ಲಿ ಆಂಧ್ರದ ಪರವಾಗಿ ಮಾತನಾಡುತ್ತಿದ್ದು. ಅವತ್ತಿನ ಶಾಸಕರು ಬಳ್ಳಾರಿ ನಗರದಿಂದ ಗೆದ್ದು ಬಂದಿದ್ದರು. ಆಗ ಅಲ್ಲಿದ್ದ ಒಬ್ಬ ಹಿರಿಯ ನಾಯಕರಾದ ಸಂಜೀವರೆಡ್ಡಿಯವರು ಉಪ ಮುಖ್ಯಮಂತ್ರಿಗಳಾಗಿದ್ದರು. ಈ ಭಾಗದಲ್ಲಿ ದೊಡ್ಡ ನಿರ್ವಿವಾದ ನಾಯಕರಾದ ನಿಜಲಿಂಗಪ್ಪನವರೂ ಇದ್ದರು. ಅವರಿಬ್ಬರೂ ಕಲೆತು ಪ್ರತಿಯೊಂದು ವಿಷಯಕ್ಕೂ ನಾವು ಡೆಲ್ಲಿಗೆ ಹೋಗಬೇಕಾದಂಥ ಅವಶ್ಯಕತೆ ಇಲ್ಲ. ಮುಂಡಲ್ಲಾರು ಗಂಗಪ್ಪನವರು ಆಂಧ್ರದ ಪರವಾಗಿ ಬಳ್ಳಾರಿಯನ್ನು ಆಂಧ್ರಕ್ಕೆ ಸೇರಿಸಬೇಕೆಂದು ಹೇಳುತ್ತಾರೆ. ಅವರು ತಮ್ಮ ಶಾಸಕತ್ವ ಪದವಿಗೆ ರಾಜೀನಾಮೆ ಕೊಡಲಿ, ಆಗ ಮತ್ತೆ ಉಪ ಚುನಾವಣೆ ಬರುತ್ತದೆ, ಆ ಉಪ ಚುನಾವಣೆಯಲ್ಲಿ

ಪಕ್ಷದಿಂದ ಹೋಗದೆ, ಕನ್ನಡ ಮತ್ತು ತೆಲುಗು ಎನ್ನುವ ಪ್ಲೆಬಿಸೈಟ್ ಚುನಾವಣೆಯಾಗಲೆಂದು ಹೇಳಿ, ಅವರಿಬ್ಬರೂ ಒಮ್ಮತಕ್ಕೆ ಬರುತ್ತಾರೆ. ಮುಂಡ್ಲೂರು ಗಂಗಪ್ಪ ರಾಜೀನಾಮೆ ಕೊಡುತ್ತಾರೆ. ಆ ಉಪ ಚುನಾವಣೆಯಲ್ಲಿ ಬಳ್ಳಾರಿ ಆಂಧ್ರದಲ್ಲಿರಬೇಕೆಂದು ಪ್ರತಿ–ವಾದ ಮಾಡುವವರು ಗಂಗಪ್ಪನವರಿಗೆ ವೋಟು ಕೊಡಬೇಕೆಂದೂ, ಕನ್ನಡ ನಾಡಿನಲ್ಲಿ ಉಳಿಯಬೇಕೆನ್ನುವುದಕ್ಕೆ ಅರಗಿನ ದೋಣಿ ಚನ್ನಬಸಪ್ಪಗೌಡ ಎನ್ನುವವರನ್ನು ನಾವು ಪ್ರತಿಸ್ಪರ್ಧಿಯಾಗಿ ನಿಲ್ಲಿಸಿದೆವು. ಆ ಸಂದರ್ಭದಲ್ಲಿ ಎರಡೂವರೆ ಸಾವಿರ ವೋಟುಗಳಿಂದ ಕನ್ನಡದ ಪರವಾಗಿ ಬಳ್ಳಾರಿ ಇರಬೇಕೆನ್ನುವುದಕ್ಕೆ ಅರಗಿನ ದೋಣಿ ಚನ್ನಬಸಪ್ಪಗೌಡರು ಗೆದ್ದು ಬರುತ್ತಾರೆ. ಅವತ್ತು ಆ ವಿಚಾರ ಮುಕ್ತಾಯವಾಗುತ್ತದೆ. ಇವತ್ತಿಗೂ ಕೂಡ, ಬಳ್ಳಾರಿಯಲ್ಲಿರುವ ಪ್ರತಿಯೊಬ್ಬ ಶಾಸಕರಾಗಲಿ, ಜನ ಪ್ರತಿನಿಧಿಗಳಾಗಲಿ ಯಾರೂ ಕೂಡ ನಾವು ಆಂಧ್ರಕ್ಕೆ ಹೋಗುತ್ತೇವೆ ಎನ್ನುವ ಮಾತಿಲ್ಲ. ತೆಲಂಗಾಣದಲ್ಲಿ ಈ ವಿಚಾರ ಚರ್ಚೆ ಆಗುತ್ತದೆನ್ನುವ ಕಾರಣಕ್ಕಾಗಿ, ವಿಜಯ ಭಾಸ್ಕರ ರೆಡ್ಡಿಯವರ ಮಗ ಶ್ರೀ ಸೂರ್ಯಪ್ರಕಾಶ್ ರೆಡ್ಡಿ ಎನ್ನುವವರು ಕೌಂಟರ್ ಪ್ರಪೋಸಲ್ ರೀತಿಯಲ್ಲಿ ನಮ್ಮನ್ನು ರಾಯಲ ಸೀಮಾದಲ್ಲಿ ಬಳ್ಳಾರಿಯನ್ನು ಸೇರಿಸುವ ಪ್ರಯತ್ನ ಮಾಡುತ್ತಾರೆ. 1953ರಲ್ಲಿ ಮಿಶ್ರಾ ಆಯೋಗದ ವರದಿ, 56 ರಲ್ಲಿ ಫಜ್‌ಲಾಲಿ ಖಯೂಬ್ ಕೊಟ್ಟಿರುವ ವರದಿ, ನಂತರದ ಬೆಳವಣಿಗೆಗಳು, ಚುನಾವಣೆಗಳು, ನಾವೆಲ್ಲಾ ಆದ ಮೇಲೆ, ಬಳ್ಳಾರಿಯವರು ಯಾವುದೇ ಕಾರಣಕ್ಕೆ ನಾವು ಆಂಧ್ರಪ್ರದೇಶಕ್ಕೆ ಹೋಗುವ ಪ್ರಶ್ನೆ ಇಲ್ಲ. ಅದು ಅವರ ವೈಯಕ್ತಿಕವಾದಂಥ ಹೇಳಿಕೆ. ಸರ್ಕಾರ ಮಹಾಜನ್ ವರದಿಯನ್ನು ಸಂಪೂರ್ಣ ಜಾರಿಗೊಳಿಸಿ, ರಾಯದುರ್ಗ, ಆಲೂರು ಮತ್ತು ಆದೋನಿ ಈ ಮೂರೂ ತಾಲ್ಲೂಕುಗಳು ನಮ್ಮ ಪ್ರದೇಶಕ್ಕೆ ಸೇರಬೇಕೆಂದು ನಾವು ಹೋರಾಟ ಮಾಡುವ ಜನರೇ ವಿನಃ ಅಲ್ಲಿ ಸೇರುವ ಜನರು ನಾವಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಹಾಜನ್ ವರದಿ ಯಥಾವತ್ ಆಗಿ ಜಾರಿಯಾಗಬೇಕು. ಈಗ ಮಹಾಜನ್ ವರದಿ ಗತಿ ಏನಾಗಿದೆ ಏನಾದರೂ ಅದರ ಬಗ್ಗೆ ವಿಚಾರವಿದೆಯೇ ? ಈಗ ಅದು ಲೋಕಸಭೆಯ ಸ್ವತ್ತಾಗಿದೆ. ಉಳಿದಿರುವುದು, ಲೋಕಸಭೆಯಲ್ಲಿ ಮಹಾಜನ್ ವರದಿಯನ್ನು ಯಥಾವತ್ ಆಗಿ ಜಾರಿ ಮಾಡಬೇಕೆಂಬುದಷ್ಟೆ. ಮಹಾಜನ್ ವರದಿ ಜಾರಿಯಾದರೆ ಕಾಸರಗೋಡು ಸಂಪೂರ್ಣವಾಗಿ ಕರ್ನಾಟಕಕ್ಕೆ ಸೇರಲೇಬೇಕು. ಆ ದೃಷ್ಟಿಯಿಂದ ಮಹಾಜನ್ ವರದಿ ಒತ್ತಾಯಕ್ಕೆ, ನಮ್ಮ ಸರ್ಕಾರದವರು ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡುತ್ತೀರಾ ?

ಶ್ರೀ ಎಂ.ಪಿ. ಪ್ರಕಾಶ್ : ಈಗಾಗಲೇ 73ರ ಮಿತಿಗಳನ್ನು ನಾನು ಪ್ರಸ್ತಾಪಿಸಿ, ಸದಸ್ಯರಿಗೆ ವಿಚಾರ ತಿಳಿಸಿದ್ದೇನೆ. ತಾವು ಇದನ್ನು ಪ್ರತ್ಯೇಕವಾಗಿ ಚರ್ಚೆಗೆ ತೆಗೆದುಕೊಳ್ಳಬಹುದು. ಆದರೆ, ತಾವು ಇಲ್ಲಿ ಎತ್ತಿದ್ದೀರಿ ಎನ್ನುವುದಕ್ಕೆ ಸಂಕ್ಷಿಪ್ತವಾಗಿ ಒಂದೇ ಮಾತಲ್ಲಿ ಉತ್ತರಿಸುತ್ತೇನೆ. ಲೋಕಸಭೆಯಲ್ಲಿ ಈ ವಿಚಾರವಿದ್ದರೂ, ಸುಪ್ರೀಂಕೋರ್ಟಿಗೆ ಕೂಡ ಹೋಗಿದ್ದಾರೆ. ಮಹಾಜನ್ ವರದಿಯನ್ನು ಸಂಪೂರ್ಣವಾಗಿ ಜಾರಿ ಮಾಡಬೇಕು, ಅದನ್ನು ಬಿಟ್ಟು ಬೇರೆ ವಿಚಾರದಲ್ಲಿ ನಮ್ಮ ಪ್ರಶ್ನೆ ಇಲ್ಲ. ಕಾಸರಗೋಡು ನಮ್ಮ ಭಾಗವೇ, ಈ ಕಾರಣಕ್ಕಾಗಿ ಜತ್ತ, ಗಡಹಿಂಗ್‌ಗಜಲ ಅವೆಲ್ಲವೂ ಈ ಭಾಗವೇ. ಇನ್ನೂ ಕೂಡ ಸೊಲ್ಲಾಪುರವೂ ನಮ್ಮ ಕನ್ನಡನಾಡಿಗೆ ಸೇರಬೇಕಾಗಿರುವುದು ಇದೆ. ಆದರೆ, ಅಂಥ ಎಲ್ಲ ವಿಚಾರಗಳನ್ನು ಪ್ರಸ್ತಾಪಿಸಬೇಕಾದ ಅಗತ್ಯವಿಲ್ಲ. ಈಗ ಸೀಮಿತವಾಗಿ ಮಾನ್ಯ ಕಟ್ಟಾ ಸುಬ್ರಮಣ್ಯ ನಾಯ್ಡುರವರು ಎತ್ತಿರುವ ಪ್ರಶ್ನೆಗೆ, ರಾಯಲಸೀಮಾದ ಭಾಗ ನಮ್ಮದಲ್ಲ. ಸೀಡೆಡ್ ಡಿಸ್ಟ್ರಿಕ್ಟ್ ಎಂದು ಹೇಳಿದರು. ನಾವು ಕನ್ನಡನಾಡಿನಲ್ಲಿ ಇದ್ದವರು. ಇವತ್ತು ಕೆಂಗಲ್ ಹನುಮಂತಯ್ಯನವರನ್ನು ನಾವು ಜ್ಞಾಪಿಸಿಕೊಳ್ಳಬೇಕು. 1953ರಲ್ಲಿ ನಮ್ಮ ತಾಲ್ಲೂಕುಗಳು ಬಂದಾಗ, ಇಲ್ಲಿ ಮೈಸೂರಿನಲ್ಲಿ ನಮ್ಮನ್ನು

ಸೇರಿಸುವ ವಿಚಾರದಲ್ಲಿ ಕೆಲವು ಹಿರಿಯರು ಬೇರೆ ಬೇರೆ ಕಾರಣಕ್ಕಾಗಿ ಡಿ.ವಿ.ಜಿ. ಯಂಥವರೂ ವಿರೋಧ ಮಾಡಿದರು. ಆಗ ಕಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಯಾಗಿದ್ದರು. ಭುವನೇಶ್ವರಿ ತಾಯಿಯ ಪ್ರತಿಮೆ ಇರುವ ಹಂಪಿ ಪ್ರದೇಶ ಕನ್ನಡ ನಾಡಿಗೆ ಬರುತ್ತದೆಂದು ಹೇಳಿದರೆ ನಾನು ಸ್ವಾಗತಿಸುತ್ತೇನೆಂದು ಹೇಳಿ ನಮ್ಮನ್ನು ಆಗ ಬಳ್ಳಾರಿ ಜಿಲ್ಲೆಯಲ್ಲಿ ಸೇರಿಸಿಕೊಂಡರು. ನಂತರ, ನಮ್ಮ ಎಲ್ಲಾ ಸ್ನೇಹಿತರು ಏನು ಮುಂಬೈ–ಕರ್ನಾಟಕ, ಹೈದರಾಬಾದ್–ಕರ್ನಾಟಕದಲ್ಲಿದ್ದಾರೆ, ಫಜಲಿ ಆಯೋಗದ 1956ರ ವರದಿಯಾಧಾರದ ಮೇಲೆ ಭಾಷಾವಾರು ಪ್ರಾಂತ ರಚನೆಯಾದಾಗ, ನವೆಂಬರ್ 1ನೇ ತಾರೀಖು ಬಾಬು ರಾಜೇಂದ್ರ ಪ್ರಸಾದ್‌ರಿಂದ ಪ್ರಾರಂಭವಾಗಿ ಏಕೀಕರಣದ ವ್ಯವಸ್ಥೆ ಇಲ್ಲಿ ಬಂತು. ಕನ್ನಡ ನಾಡು ಆಯಿತು. ಆ ಕಾರಣಕ್ಕಾಗಿ ಯಾವುದೇ ಕಾರಣಕ್ಕಾಗಿ ನಾವು ಒಬ್ಬ ಸೂರ್ಯಪ್ರಕಾಶ್ ರೆಡ್ಡಿ ಹೇಳಿಕೆಯನ್ನು ಬಹಳ ಗಂಭೀರವಾದ ಪರಿಗಣಿಸಬೇಕಾದ ಅಗತ್ಯವಿಲ್ಲ.

ಶ್ರೀ ವಾಟಾಳ್ ನಾಗರಾಜ್ : ತಾವು ಏನು ಹೇಳಿದಿರಿ ಅಕ್ಕಲ ಕೋಟೆ, ಸೊಲ್ಲಾಪುರ, ಇನ್ನೂ ಮುಂತಾದವುಗಳನ್ನು ಏನು ಹೇಳಿದಿರಿ ಇವು ಹೊರ–ನಾಡು ಕರ್ನಾಟಕಕ್ಕೆ ಬರುವಂಥದ್ದು. ಈಗ ಹೊರ–ನಾಡು ಕನ್ನಡ ಪ್ರದೇಶಗಳು ಕರ್ನಾಟಕಕ್ಕೆ ಸೇರುವವರೆಗೆ, ಕಾಸರಗೋಡು, ಅಕ್ಕಲ ಕೋಟೆ, ಹೊಸೂರು, ತಾಳವಾಡಿ, ಮಡಕಶಿರಾ, ಇವು ಸೇರುವವರೆಗೆ ಆ ಪ್ರದೇಶಗಳು ಏನು ಹೊರಗಡೆ ಉಳಿದಿವೆ. ಸುಮಾರು ಎರಡೂವರೆ ಕೋಟಿ ಕನ್ನಡ ಜನ ಪ್ರದೇಶ ಹೊರಗಡೆ ತಮಿಳುನಾಡಿನಲ್ಲಿ, ಆಂಧ್ರದಲ್ಲಿ ಮಹಾರಾಷ್ಟ್ರದಲ್ಲಿ ಉಳಿದಿರತಕ್ಕಂಥ ಈ ಪ್ರದೇಶದ ಕನ್ನಡ ಶಾಲೆಗಳಿಗೆ ಕನ್ನಡ ಪುಸ್ತಕಗಳಿಲ್ಲ. ತಾವು ಗಡ್‌ಹಿಂಗಜಲ್ ಇದು ಹೇಳಿದ ಮೇಲೆ, ಮಡಕಶಿರಾ ಹೇಳಿದ ಮೇಲೆ...

ಶ್ರೀ ಎಂ.ಪಿ. ಪ್ರಕಾಶ್ : ನಾನು ತಮಗೆ ಹೇಳಿದೆ, ನಮ್ಮ ಶಾಸಕ ಮಿತ್ರರು ನಿಯಮ 73ರ ಮಿತಿಯನ್ನು ನಾವು ಪ್ರಸ್ತಾಪ ಮಾಡಿದೆವು. ತಾವು ನಮ್ಮ ರಕ್ಷಣೆಗೆ ಬರಬೇಕು, ರೂಲ್ 73ರ ಮಿತಿಯ ಒಳಗೆ ಈ ಪ್ರಶ್ನೆ ಎತ್ತಿದ್ದೀರಿ ಆ ಪ್ರಶ್ನೆಗೆ ನಾವು ಉತ್ತರ ಕೊಟ್ಟಿದ್ದೇವೆ.

ಅಧ್ಯಕ್ಷರು : ದಯಮಾಡಿ ಕ್ಲಾರಿಫಿಕೇಷನ್ ಮಾತ್ರ ಕೇಳಬೇಕು.

ಶ್ರೀ ವಾಟಾಳ್ ನಾಗರಾಜ್ : ಕನ್ನಡ ಸಾಹಿತ ಪರಿಷತ್ತು ಸರ್ಕಾರಕ್ಕೆ ಕಾಗದ ಬರೆದಿದ್ದಾರೆ. ಅಲ್ಲಿರತಕ್ಕಂಥ ಹೊರನಾಡು ಕನ್ನಡಿಗರನ್ನು ಸಂಪೂರ್ಣವಾಗಿ ಗುಲಾಮರ ರೀತಿ ಅಲ್ಲಿನ ಸರ್ಕಾರಗಳು ನೋಡುತ್ತಿವೆ. ನಾನು ತಮ್ಮ ಮೂಲಕ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಮಾನ್ಯ ಪ್ರಕಾಶ್‌ರವರು ದಯಮಾಡಿ ತಾವು ಈ ಬಗ್ಗೆ..

ಅಧ್ಯಕ್ಷರು : ಮಾನ್ಯ ನಾಗರಾಜ್‌ರವರೇ, ದಯಮಾಡಿ ಇಲ್ಲಿ ಕೇಳಿ ತಾವು ನನಗೆ ಕಳುಹಿಸಿದರೆ ಬೇರೆ ಯಾವುದಾದರೂ ನಿಯಮದಡಿಯಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಕಲ್ಪಿಸಬಹುದು. ಈಗ ಈ ನಿಯಮದಡಿ ಕೇವಲ ಕ್ಲಾರಿಫಿಕೇಷನ್ ಕೇಳಬಹುದಷ್ಟೆ. ಚರ್ಚೆಗೆ ಅವಕಾಶವಿಲ್ಲ. ದಯಮಾಡಿ ಸಹಕರಿಸಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ವಾಟಾಳ್ ನಾಗರಾಜ್ ರವರೇ, ಅಡ್ವಾನಿ ಮೊದಲಾಂಥ ಭಾಗದಲ್ಲಿ ಪುಸ್ತಕಗಳನ್ನು ಈಗ ನಾವು ಸೈಕ್ಲೋಸ್ಟೈಲ್ ಮಾಡಿ ಅಲ್ಲಿ ಯಲಿವೇಶಪ್ಪ ಕನ್ನಡ ಹೈ ಸ್ಕೂಲ್ ನವರು ಆ ಭಾಗದಲ್ಲಿ ಎಲ್ಲಾ ಕೊಟ್ಟಿದ್ದಾರೆ. ಸರ್ಕಾರದವರು ಮೈನಾರಿಟಿ, ಭಾಷಣ ಅಲ್ಪಸಂಖ್ಯಾತರ ಪರವಾಗಿ ಇದನ್ನು ಗಮನಕ್ಕೆ ತಂದಿದ್ದಾರೆ. ಕಳೆದ ಮೂರು–ನಾಲ್ಕು ವರ್ಷಗಳಿಂದ ಕೂಡ ಈ ತರಹದ ತಕರಾರು ಆಂಧ್ರದಿಂದ ಬರುತ್ತಿರುವ ಕಾರಣ ಇದ್ದುದ್ದರಿಂದ, ನಾವು ಇಲ್ಲಿಯೇ

ಕನ್ನಡ ಪುಸ್ತಕಗಳನ್ನು ಕೊಡಬೇಕೆಂದು ಹಿಂದೆ ಮಾನ್ಯ ಜೆ.ಹೆಚ್. ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಮಾಡಿ ಕನ್ನಡ ಪುಸ್ತಕಗಳನ್ನು ಅವರು ಸೀಲಬಸ್‌ಗೆ ಸಂಬಂಧಪಟ್ಟಂಥದ್ದನ್ನು ಕೂಡ ನಾವು ಹಂಚಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಈಗ ಏನು ಮಾಡುತ್ತೀರಿ ?

ಶ್ರೀ ಎಂ.ಪಿ. ಪ್ರಕಾಶ್ : ಈಗ ಆಗಿಲ್ಲ ಅದು ನಿಂತಿದೆ ಅದರ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ.

(ಗೊಂದಲ)

ಶ್ರೀ ಬಿ. ಶ್ರೀರಾಮುಲು : ಇದು ತುಂಬಾ ಮುಖ್ಯವಾದ ವಿಚಾರವಾಗಿರುವುದರಿಂದ ಆ ಭಾಗದ ಶಾಸಕರಾದ ನಾವುಗಳು ಮಾತನಾಡಬೇಕಾಗಿದೆ ಆದ್ದರಿಂದ ಚರ್ಚೆಗೆ ತಾವು ಅವಕಾಶ ಮಾಡಿಕೊಡಬೇಕು.

ಶ್ರೀ ಎಂ.ಎಸ್. ಸೋಮಲಿಂಗಪ್ಪ : ಇದರಲ್ಲಿ ರಾಜಕೀಯ ವಿಷಯ ಬರಬಾರದು.

ಶ್ರೀ ಬಿ. ಶ್ರೀರಾಮುಲು : ಅದು 1953ನೇ ಇಸ್ವಿಯಲ್ಲಿಯೇ ಮುಗಿದು ಹೋಗಿರುವಂಥ ಅಧ್ಯಾಯ. ಮತ್ತೆ ಮತ್ತೆ ನಮ್ಮ ಬಳ್ಳಾರಿಯನ್ನು ಆಂಧ್ರದಲ್ಲಿ ಸೇರಿಸಿ, ರಾಯಲ್ ಸೀಮೆಯಲ್ಲಿ ಸೇರಿಸುವಂಥ ಮಾತು ಬರಬಾರದು. ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಯಾರೋ ಆಂಧ್ರದವರು ಸೂರ್ಯಪ್ರಕಾಶ್ ರೆಡ್ಡಿಯವರು ಹೇಳುತ್ತಾರೆಂದರೆ..

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಚರ್ಚೆಗೆ ಅವಕಾಶವಿಲ್ಲ ಅವರು ಎಲ್ಲಾ ಉತ್ತರದಲ್ಲಿ ಹೇಳೀದ್ದಾರೆ, ದಯಮಾಡಿ ಕುಳಿತುಕೊಳ್ಳಿ. ನಮ್ಮ ಭಾವನೆಗಳನ್ನು ಹೇಳಿದ್ದೀರಿ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಂ.ಎಸ್. ಸೋಮಲಿಂಗಪ್ಪ : ಮಾನ್ಯ ಅಧ್ಯಕ್ಷರೆ, ಅಲೂರು ಮತ್ತು ಅದ್ವಾನಿ ರಾಯಲ್ ಸೀಮೆಗೆ ಸೇರಿದ್ದಲ್ಲ ಬಳ್ಳಾರಿ ಜಿಲ್ಲೆಗೆ ಸೇರಿದ್ದು. ಆ ದಿವಸ ಮದ್ರಾಸ್ ಗೌರ್ನಮೆಂಟ್‌ನಲ್ಲಿ ಬಳ್ಳಾರಿ ಜಿಲ್ಲೆಗೆ ಸೇರಿದ ಅದವಾನಿ ಮತ್ತು ಆಲೂರು, ಈ ಎರಡು ಊರುಗಳನ್ನು ಕರ್ನಾಟಕಕ್ಕೆ ಸೇರಿಸಬೇಕೆಂದು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವಂಥ ನಿರ್ಣಯ ಮಾಡಬೇಕೆಂದು ತಮ್ಮ ಮೂಲಕ ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಬಿ. ಶ್ರೀರಾಮುಲು : ಇದು 1956 ನೇ ಇಸ್ವಿಯಲ್ಲಿಯೇ ಮುಗಿದು ಹೋಗಿರುವಂಥ ಅಧ್ಯಾಯ, ಇದು ಚುನಾವಣೆ ಕೂಡ ನಡೆದಿದೆ. ಮುಂಡ್ಲೂರು ಗಂಗಪ್ಪನವರಿಗೆ ಮತ್ತು ಅರಿಗಿನದೋಣಿ ಚೆನ್ನಬಸವಗೌಡ್ರುರಿಗೆ ಚುನಾವಣೆಗಳು ನಡೆದಿದೆ. ಮುಂಡ್ಲೂರು ಗಂಗಪ್ಪನವರು, ಸಚಿವರು ಹೇಳಿದ ಹಾಗೆ 2500 ವೋಟುಗಳಲ್ಲಿ ಸೋತು ಹೋಗಿ ಅವರು ಒಪ್ಪಿಕೊಂಡಿದ್ದಾರೆ. ನಾನು ಮಾಡಿರುವಂಥದ್ದು ತಪ್ಪು ಎಂದು ಸಾರ್ವಜನಿಕರ ಎದುರಿನಲ್ಲಿ ಒಪ್ಪಿಕೊಂಡಿದ್ದಾರೆ. ಏಕೆಂದರೆ, ಆ ಸೂರ್ಯಪ್ರಕಾಶ್ ರೆಡ್ಡಿಯವರು ಏನು ಆ ಒಂದು ಪ್ರಸ್ತಾಪ ಮಾಡಿದ್ದಾರೆ ಅದು ಒಂದು ಹುಚ್ಚುತನ. ಏಕೆಂದರೆ, ಗುಂತರಕಲ್, ಅಲೂರು, ಅದ್ವಾನಿ ಇನ್ನಿತರ ಭಾಗಗಳು ನಮ್ಮ ಕರ್ನಾಟಕಕ್ಕೆ ಬರುವಂಥ ಭಾಗಗಳು ಆಂಧ್ರದಲ್ಲಿವೆ. ಇಂಥ ಪರಿಸ್ಥಿತಿಯಲ್ಲಿ ಈ ರೀತಿಯ ಚರ್ಚೆಗೆ ಬರಬಾರದು. ಹಾಗಾಗಿ ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನಾನು ಮಾನ್ಯ ಅಧ್ಯಕ್ಷರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಬಳ್ಳಾರಿ ಕರ್ನಾಟಕದ ಅವಿಭಾಜ್ಯ ಅಂಗ ಇದರಲ್ಲಿ ಎರಡನೇ ಮಾತಿಲ್ಲ. ಸನ್ಮಾನ್ಯ ಕಂದಾಯ ಸಚಿವರು ಯಾರೋ ಒಬ್ಬರು ಹೇಳಿಕೆಯಿಂದ ನಾವು ಗೊಂದಲಕ್ಕೀಡಾಗಬೇಕಾಗಿಲ್ಲವೆಂದು ಹೇಳಿದರು. ಹೇಳಿದವರು ಹಿಂದಿನ ಆಂಧ್ರದ ಮುಖ್ಯಮಂತ್ರಿಯವರ ಕಾಂಗ್ರೆಸ್ಸಿನ ಮುಖಂಡ; ಆಂಧ್ರದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿ ಇದೆ. ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿ ಅಧಿಕಾರದಲ್ಲಿದೆ. ಇಲ್ಲಿ ಕೂಡ ಅವರ ನೇತೃತ್ವದಲ್ಲಿ ಅಧಿಕಾರ ಇದೆ. ಬೇರೆ ಯಾರೋ ಸಾಮಾನ್ಯ ಜನ ಹೇಳಿದ್ದರೆ, ಅಲ್ಲಿಯ ಜನ ಗೊಂದಲಕ್ಕೆ ಈಡಾಗುತ್ತಿರಲಿಲ್ಲ, ಹೇಳಿದವರು ಒಂದು ಪ್ರಮುಖ ರಾಜಕೀಯ ಪಕ್ಷದ ಸಂಸತ್ ಸದಸ್ಯರು, ಸಾಮಾನ್ಯ ಜನರು ಹೇಳಲಿಲ್ಲ, ದಾರಿಯಲ್ಲಿ ಹೋಗುವವರು ಹೇಳಲಿಲ್ಲ, ಹೀಗಾಗಿ ಇವತ್ತು ಬಳ್ಳಾರಿ ಜನ ಶಾಂತಿಯಿಂದ ಬದುಕುತ್ತಿದ್ದಾರೆ, ಸನ್ಮಾನ್ಯ ಎಂ.ಪಿ. ಪ್ರಕಾಶ್ ಸಾಹೇಬರು, ಬುದ್ಧಿವಂತರು, ಅತ್ಯಂತ ಸಂಸದೀಯ ಪಟುಗಳೆಂದು ನಾವು ಎಲ್ಲರೂ ಗೌರವ ಇಟ್ಟಿದ್ದೇವೆ. ತಾವು ಹೇಳಿದ ಮಾತುಗಳು ಸತ್ಯ. ಆದರೆ ಇಲ್ಲಿ ಬರುತ್ತಿರುವ ಸಮಸ್ಯೆ ಏನೆಂದರೆ, ಈ ಸಮಸ್ಯೆಗಳನ್ನು ಹುಟ್ಟು ಹಾಕುತ್ತಿರುವವರು ಯಾರು ? ಕಾಂಗ್ರೆಸ್‌ನವರಾ ಯಾರು ? ಇದನ್ನು ತಾವು ಹೇಳಬೇಕಾಗಿದೆ. ತಮ್ಮ ಪ್ರತಿಭಟನೆ ಏನು ಇದರ ಬಗ್ಗೆ? ಕೇಂದ್ರಕ್ಕೆ ಏನಾದರೂ ಇದರ ಬಗ್ಗೆ ಪ್ರತಿಭಟನೆ ಮಾಡಿದ್ದೀರಾ ? ಇಲ್ಲಾ ಆಂಧ್ರಪ್ರದೇಶದ ಮುಖ್ಯಮಂತ್ರಿಗಳಿಗೆ ತಮ್ಮ ಪ್ರತಿಭಟನೆಯನ್ನು ವ್ಯಕ್ತ ಮಾಡಿದ್ದೀರಾ ? ಈಗಾಗಲೇ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದರು, ಹೊಸೂರು ನಮ್ಮದಾಗಿತ್ತು. ಕಳೆದುಕೊಂಡೆವು. ಅದೇ ರೀತಿ ಕಾಸರಗೋಡು ನಮ್ಮದಾಗಿತ್ತು ಅದು ನಮ್ಮನ್ನು ಬಿಟ್ಟು ಹೋಯಿತು. ಸೊಲ್ಲಾಪುರ ನಮ್ಮದಾಗಿತ್ತು ಅದು ಬಿಟ್ಟು ಹೋಯಿತು. ನಾಳೆ ಬೆಳಿಗ್ಗೆ ಅಮ್ಮನವರು ಕೊಳ್ಳೆಗಾಲದಲ್ಲಿ ತಮಿಳು ಮಾತನಾಡುವವರು ಜಾಸ್ತಿ ಜನ ಇದ್ದಾರೆ ಅದನ್ನು ತಮಿಳುನಾಡಿಗೆ ಬಿಟ್ಟುಬಿಡಿ ಎಂದು ಕೇಳುತ್ತಾರೆ. ಆಗ ನಾವು ಏನು ಮಾಡುವುದು ಸ್ವಾಮಿ ? ಇದೇ ರೀತಿ ನೆಲ, ಜಲ ಬೇಕು, ಬೇರೆಯವರಿಗೆ ಎಲ್ಲರಿಗೂ ಕೂಡ ಕರ್ನಾಟಕದ ಮೇಲೆನೇ ಕಣ್ಣು. ಯಾವುದಕ್ಕೋಸ್ಕರ ನಾವು ಸಹಿಸಿಕೊಂಡಿರಬೇಕು. ಯಾವುದಕ್ಕೋಸ್ಕರವಾಗಿ ನಾವು ಸುಮ್ಮನೆ ಇದ್ದೇವೆ. ಯಾರೋ ಸಾಮಾನ್ಯರು ಹೇಳಿದ್ದರೆ, ಪಂಚಾಯತ್ ಸದಸ್ಯ. ಗ್ರಾಮ ಪಂಚಾಯತ್ ಸದಸ್ಯ ಅಥವಾ ಹಳ್ಳಿ ಜನ ಹೇಳಿದ್ದರು ಎಂದರೆ ಅದಕ್ಕೆ ಮಹತ್ವವಿಲ್ಲ. ನಾನೂ ಒಪ್ಪುತ್ತೇನೆ. ಈ ಸಮಸ್ಯೆಗಳನ್ನು ಹುಟ್ಟುಹಾಕುವಂಥ ವ್ಯಕ್ತಿಗಳು ಯಾರು ? ಅದರ ಹಿನ್ನೆಲೆ ಏನು ? ಯಾವ ಪಕ್ಷದವರು ? ಇದನ್ನು ನಾವು ಯೋಚನೆ ಮಾಡುವಂಥದ್ದು ತುಂಬಾ ಮುಖ್ಯವೆಂದು ನಾನು ಅಂದುಕೊಂಡಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್ : ಇದರಲ್ಲಿ ನಾವು ಮಾತನಾಡುವುದಕ್ಕೆ ಬರುವುದಿಲ್ಲ ಆದರೂ ಇದರಲ್ಲಿ ಪಕ್ಷ ಏಕೆ ತರುತ್ತೀರಿ ? ಅದರಲ್ಲಿ ಎಲ್ಲರೂ ಒಂದೇ ಇದ್ದೇವೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಹಾಗಾದರೆ ಹೇಳಿರುವವರು ಯಾರು ? ಸಾಮಾನ್ಯ ಜನ ಹೇಳಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಸುಮ್ಮನೆ ರಾಜಕೀಯ ಏಕೆ ಮಾಡುತ್ತೀರಿ ? ಎಲ್ಲದಕ್ಕೂ ನೀವು ರಾಜಕೀಯ ಮಾಡುತ್ತೀರಲ್ಲಾ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾನ್ಯ ಎಸ್ ಎಸ್ ಪಾಟೀಲ್‌ರೇ, ನಿಮಗ್ಯಾಕೆ ನೀವು ಕನ್ನಡಿಗರು, ನೀವು ಕರ್ನಾಟಕದವರು

(ಗೊಂದಲ)

ಮಾನ್ಯ ರಮೇಶ್‌ಕುಮಾರ್ ಇಂಗ್ಲೀಷ್‌ನಲ್ಲಿ ಮಾತನಾಡಿದರು. ನೀವು ಇಲ್ಲಿದ್ದಾಗ ಯಾರಾದರೂ ಇಂಗ್ಲೀಷ್‌ನಲ್ಲಿ ಮಾತನಾಡಿದರೆ ಕೇಳುತ್ತಿದ್ದೀರಿ, ನಿಮಗ್ಯಾಕೆ? ಹಾಗಾದರೆ ಅವರು ಕಾಂಗ್ರೆಸ್‌ನವರು ಅಲ್ಲವೆಂದು ಹೇಳಲಿ. ಅವರು ಕಾಂಗ್ರೆಸ್‌ನವರು ಅಲ್ಲವೆಂದು ಒಪ್ಪಿಕೊಳಲಿ. ಸೂರ್ಯಪ್ರಕಾಶ್ ಎಂ.ಪಿ. ಕಾಂಗ್ರೆಸ್‌ನವರು ಅಲ್ಲ ಎಂದು ಇವರು ಹೇಳಲಿ ನಾವು ಒಪ್ಪಿಕೊಳ್ಳೋಣ. ಅವರು ಕಾಂಗ್ರೆಸ್‌ನವರು ಅಲ್ಲ ಬೇರೆಯವರು ಎಂದು ಹೇಳಲಿ. ಅವರು ಪ್ರಭಾವಿ ವ್ಯಕ್ತಿಯಲ್ಲವೆಂದು ಹೇಳಲಿ.

ಶ್ರೀ ಎಸ್.ಎಸ್. ಪಾಟೀಲ್ : ನೋಡ್ರಿ ನಿರ್ಣಯವಾಗಿದೆ, ಈ ಸದನದಲ್ಲಿ ನಿರ್ಣಯ ಮಾಡಿದ್ದೇವೆ, ಮಹಾಜನ್ ವರದಿ ಬಿಟ್ಟು ಇನ್ನೊಂದು ಬೇರೆ ವರದಿ ಒಪ್ಪುವ ಪ್ರಶ್ನೆಯಿಲ್ಲ. ಯಾವುದೇ ವ್ಯಕ್ತಿಯಾಗಿದ್ದರೂ ಎಲ್ಲರೂ ಹೋರಾಟಕ್ಕೆ ತಯಾರಿದ್ದೇವೆ. ಸುಮ್ಮನೆ ಏಕೆ ಅದನ್ನು ತರುತ್ತೀರಿ ? ಯಾರು ಬೇಕಾದವರೂ ಹೇಳಲಿ, ಆಂಧ್ರದ ಮುಖ್ಯಮಂತ್ರಿಗಳೇ ಹೇಳಲಿ; ಸುಮ್ಮನೇ ಏನೋ ಮಾತನಾಡಿದರೆ ಹೇಗೆ ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಎಸ್.ಎಸ್. ಪಾಟೀಲರೇ ಅವರು ಕಾಂಗ್ರೆಸ್‌ನವರು ಅಲ್ಲವೇ ಹಾಗಾದರೆ ಅವರು ಯಾರು ಎಂದು ಹೇಳಿ.

ಅಧ್ಯಕ್ಷರು : ನಾಯ್ಡುರವರೇ, ಸ್ಪಷ್ಟೀಕರಣ ಕೇಳಿ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ನಾನು ಸ್ಪಷ್ಟೀಕರಣವನ್ನೇ ಕೇಳುತ್ತಿದ್ದೇನೆ.

ಅಧ್ಯಕ್ಷರು : ನೀವು ಆ ಪಕ್ಷ ಈ ಪಕ್ಷ ಎಂದು ಹೇಳಿದರೆ ಈ ರೀತಿ ಗಲಾಟೆ ಸಹಜ. ದಯಮಾಡಿ ಸ್ಪಷ್ಟೀಕರಣ ಕೇಳಿರಿ.

ಶ್ರೀ ಎಸ್. ಎಸ್. ಪಾಟೀಲ್ : ಮಹಾಜನ ವರದಿ ಬಿಟ್ಟು ಬೇರೆ ಏನೂ ಇಲ್ಲ ಅದಕ್ಕೆ ಇಡೀ ಸದನ ಒಪ್ಪಿದೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ನಾನು ಪದೇ ಪದೇ ಹೇಳುತ್ತಿದ್ದೇನೆ ಇದು ಯಾರೋ ಸಾಮಾನ್ಯರು ಹೇಳಿದಂಥ ಮಾತಲ್ಲ. ಕಾಂಗ್ರೆಸ್‌ನ ಮುಖಂಡರು ಹೇಳಿದಂಥ ಮಾತಿದು.

(ಗೊಂದಲ)

ಆದ್ದರಿಂದ ನಾನು ಮಾನ್ಯ ಕಂದಾಯ ಸಚಿವರಲ್ಲಿ ಸ್ಪಷ್ಟೀಕರಣ ಕೇಳುತ್ತೇನೆ. ಇದು ಕಾಂಗ್ರೆಸ್‌ನ ಮುಖಂಡರು ಹೇಳಿರುವಂಥ ಮಾತು.

ಶ್ರೀ ಎಸ್. ಎಸ್. ಪಾಟೀಲ್ : ಬೆಂಗಳೂರಿನಲ್ಲಿ ಪರಿಸ್ಥಿತಿ ಏನಾಗಿದೆ ಇದರ ಬಗ್ಗೆ ಲಕ್ಷ್ಯ ಕೊಡಿ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ ಸಹಕರಿಸಿ.

ಶ್ರೀ ಎಸ್. ಎಸ್. ಪಾಟೀಲ್ : ಬೆಂಗಳೂರಿನಲ್ಲಿ ಕನ್ನಡಿಗರೇ ಇಲ್ಲ ಇದರ ಬಗ್ಗೆ ನಿಮ್ಮದು ಏನು ?

ಶ್ರೀ ಎನ್ ಎಸ್ ಬೋಸರಾಜು : ಮಹಾರಾಷ್ಟ್ರದಲ್ಲಿ ಮಾಡಿರುವವರು ನಿಮ್ಮ ಜೊತೆಯಲ್ಲಿಯೇ ಇದ್ದಾರೆ. ಶಿವಸೇನೆಯವರು ಶಿವಸೇನೆಯವರು ನಿಮ್ಮ ಜೊತೆಯಲ್ಲಿಯೇ ಇದ್ದಾರೆ. ಅವರು ಏನು ಮಾಡುತ್ತಿದ್ದಾರೆಂಬುದನ್ನು ಮೊದಲು ನೀವು ಹೇಳಿ. ಅವರನ್ನು ಜೊತೆಯಲ್ಲಿ

ಇಟ್ಟುಕೊಂಡಿದ್ದೀರಲ್ಲಾ ನಿಮ್ಮ ಸಹಭಾಗತ್ವದಲ್ಲಿ ಇದ್ದರಲ್ಲಾ ಅವರ ಬಗ್ಗೆ ಹೇಳಿ. ಬರಿ ಏನಾದರೂ ಮಾತನಾಡಿದರೆ ಕಾಂಗ್ರೆಸ್, ಕಾಂಗ್ರೆಸ್ ಎಂದು ಹೇಳದಿದ್ದರೆ ನಿಮಗೆ ನಿದ್ದೆಯೇ ಬರುವುದಿಲ್ಲ.

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ನಮ್ಮ ರಾಜ್ಯದ ಸಮಸ್ಯೆ ಬಂದಾಗ, ಗಡಿ ವಿವಾದ ಬಂದಾಗ, ಜಲದ ಸಮಸ್ಯೆ ಬಂದಾಗ ನೆಲದ ಸಮಸ್ಯೆ ಬಂದಾಗ ನಾನು ಹೇಳಿರುವಂಥದ್ದು ಯಾರು ಇದನ್ನು ಪ್ರಸ್ತಾಪ ಮಾಡಿದರು ?

(ಗೊಂದಲ)

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೇ, ನಾನು ಕ್ರಿಯಾಲೋಪ ಎತ್ತಿದ್ದೇನೆ. ದಯಮಾಡಿ ಸ್ವಲ್ಪ ಸುಮ್ಮನೆ ಕುಳಿತುಕೊಳ್ಳಿ. ಮಾನ್ಯ ನಾಯ್ಡು ರವರೇ, ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದೇನೆ. ಒಂದು ನಿಮಿಷ ಕುಳಿತುಕೊಳ್ಳಿ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಆಗಬಹುದು.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಸನ್ಮಾನ್ಯ ಅಧ್ಯಕ್ಷರೇ, ನಾನು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುತ್ತಿದ್ದೇನೆ. ನಮ್ಮ ನಿಯಮಾವಳಿಗಳ ಪ್ರಕಾರ ಈ ಸದನದಲ್ಲಿ ಕೆಲವು ವಿಚಾರಗಳನ್ನು ಚರ್ಚೆ ಮಾಡುವಾಗ ಬಹಳ ಜಾಗ್ರತೆಯಿಂದ ಮಾಡಬೇಕಾಗುತ್ತದೆ. ಯಾವ ವಿಚಾರಗಳನ್ನು ಇಲ್ಲಿ ಚರ್ಚೆಗೆ ತೆಗೆದುಕೊಂಡು. ಚರ್ಚೆ ತನ್ನ ಇತಿಮಿತಿಯನ್ನು ಧಾಟಿ ಹೋಗಿ ಇದರ ಫಲದಿಂದಾಗಿ ಹೊರಗಡೆ ಅಶಾಂತಿ ಆಗಬಾರದು.

2.10 ಪಿಎಂ

ಬೇರೆ ಕಾರಣಗಳಿಂದ ಹೊರಗಡೆ ಒಂದು ವೇಳೆ ಅಶಾಂತಿ ಇದ್ದರೆ ಆ ವಿಷಯವನ್ನು ಇಲ್ಲಿ ಚರ್ಚೆ ಮಾಡಬೇಕಾದರೂ ಕೂಡ ಅದು ಉಲ್ಬಣವಾಗುವ ರೀತಿಯಲ್ಲಿ ಇಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ಯಾರೋ ಒಬ್ಬರು ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರು ಸಂಸತ್ ಸದಸ್ಯರಿರಬಹುದು ಮತ್ತು ಕಾಂಗ್ರೆಸ್‌ನವರೂ ಕೂಡ ಇರತಕ್ಕಂಥದಲ್ಲಾ ನಿಜವಾಗಿದೆ. ಆದರೆ, ಅವರು ಕೊಟ್ಟಿರತಕ್ಕಂಥ ಹೇಳಿಕೆ ಅವರ ಸ್ವಂತ ಅಭಿಪ್ರಾಯವಾಯಿತು. ಅವರು ಆಂಧ್ರಪ್ರದೇಶದ ರಾಜ್ಯದವರು ಆದ್ದರಿಂದ ಅವರ ಅಭಿಪ್ರಾಯವನ್ನು ಹೇಳಿದ್ದಾರೆ. ನಮ್ಮ ರಾಜ್ಯದ ಪರವಾಗಿ ಮತ್ತು ನಮ್ಮ ಸರ್ಕಾರದ ಪರವಾಗಿ ಮಾನ್ಯ ಮಂತ್ರಿಗಳು ಜವಾಬ್ದಾರಿಯುತ್ತವಾಗಿ ಸರ್ಕಾರದ ನಿಲುವೇನು ಎಂಬುದನ್ನು ದೃಢಪಡಿಸಿದ್ದಾರೆ. ಮತ್ತೆ ಬಳ್ಳಾರಿಯ ಜನ ಇವತ್ತಿನ ದಿವಸ ಇದಕ್ಕೇನು ಸೊಪ್ಪು ಹಾಕಿಲ್ಲ. ಮತ್ತೆ ಅಲ್ಲಿನ ಜನ ಇದಕ್ಕೇನ್ನೂ ಬೆಲೆ ಕೂಡ ಕೊಟ್ಟಿಲ್ಲ. ಮತ್ತೆ ಬಳ್ಳಾರಿ ಜಿಲ್ಲೆಯಿಂದ ಬಂದಿರತಕ್ಕಂಥ ಶಾಸಕರೆಲ್ಲರೂ ಕೂಡ ಒಕ್ಕೊರಲಿನಿಂದ ಇದೆಲ್ಲಾ ಅಗತ್ಯವಿಲ್ಲವೆಂದು ಹೇಳಿದ್ದಾರೆ. ಆ ಪಕ್ಷ ಈ ಪಕ್ಷ ಇನ್ನೊಂದು ಮತ್ತು ಮತ್ತೊಂದೆಂದು ನಾವು ಇಲ್ಲಿ ಜಗಳ ಮಾಡಿ ಕೊಂಡು, ಈ ಜಗಳ ನಾಳೆ ದಿವಸ ಹೊರಕ್ಕೆ ಬಂದು ಈ ಕಾರಣಗಳು ಮತ್ತೆ ಪ್ರಾರಂಭ ಆಗಬೇಕೆ ? This House has a very serious responsibility to cast upon it. we cannot be a party for these things. That is his individual freedom. ಮಾನ್ಯ ಸೂರ್ಯಪ್ರಕಾಶ್‌ರವರು ತಮಗೆ ಬೇಕಾದನ್ನು ಹೇಳಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿ ಹಲವಾರು ರೀತಿಯ ಜನರಿದ್ದಾರೆ. ಈಗ ಆಂಧ್ರಪ್ರದೇಶದಲ್ಲಿರತಕ್ಕಂಥ ಕಾಂಗ್ರೆಸ್‌ನವರು ಆಲಮಟ್ಟಿಯಿಂದ ನೀರು ಬಿಡಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಆದರೆ. ನಮ್ಮ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಕಾಂಗ್ರೆಸ್‌ನವರು ಆಲಮಟ್ಟಿಯಿಂದ ನೀರು ಬಿಡುವುದಿಲ್ಲವೆಂದು ಹೇಳುತ್ತೇವೆ. ಆದರೆ, ನಮ್ಮದೇ ಆದಂಥ ಪಕ್ಷ ರಾಷ್ಟ್ರವ್ಯಾಪ್ತಿ ಇರುವ ಕಾರಣದಿಂದ ನಾವೆಲ್ಲರೂ

ಕಾಂಗ್ರೆಸ್ ಪಕ್ಷದಲ್ಲಿ ಒಟ್ಟಿಗೆ ಇರಬೇಕಾಗುತ್ತದೆ. That is not the matter for debate here. This House shall have to confine to the rules that is in force.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಯಾರ ಹೆಸರನ್ನು ಪ್ರಸ್ತಾಪ ಮಾಡಿದ್ದಾರೆಯೋ ಅವರ ಹೆಸರನ್ನು ಬಿಟ್ಟು ಬೇರೆ ಯಾರ ಹೆಸರನ್ನು ನಾನು ಹೇಳುವುದಕ್ಕೆ ಹೋಗಿಲ್ಲ. ಆದ್ದರಿಂದ ನಾನು ಯಾವ ನಿಯಮವನ್ನು ತಪ್ಪಿದ್ದೇನೆ ಎನ್ನತಕ್ಕಂಥದನ್ನು ತಾವು ನನಗೆ ದಯವಿಟ್ಟು ತಿಳಿಸಬೇಕು.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಸೂರ್ಯಪ್ರಕಾಶ್ ರೆಡ್ಡಿಯವರನ್ನು ಇಲ್ಲಿಗೆ ಕರೆದು ನಿಲ್ಲಿಸಿ ಎಕ್ಸ್‌ಪ್ಲನೇಷನ್ ಕೇಳುವುದಕ್ಕೆ ಈ ಸದನಕ್ಕೆ ಅಧಿಕಾರ ಇದೆಯೆ ? what can the government do? ಅಲ್ಲಿ ಅವರ ಸರ್ಕಾರ ಅಧಿಕಾರದಲ್ಲಿದ್ದು, ಅವರಿಗೂ ಜವಾಬ್ದಾರಿ ಇರುವುದರಿಂದ ಈ ರೀತಿಯಾಗಿ ಹೇಳಿದ್ದಾರೆ. ಈಗಾಗಲೇ ಅವರು ಹೇಳಿರತಕ್ಕಂಥದ್ದಕ್ಕೆ ನಮ್ಮ ಸರ್ಕಾರದ ನಿಲುವು ಏನು ಎನ್ನತಕ್ಕಂಥದನ್ನು ಮಾನ್ಯ ಸಚಿವರು ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಆದ್ದರಿಂದ, ಮತ್ತೇಕೆ ಇದರ ಮೇಲೆ ಸೃಷ್ಟೀಕರಣವೇಕೆ ?

(ಗೊಂದಲ)

ಅಧ್ಯಕ್ಷರು : ಮಾನ್ಯ ನಾಯ್ಡುರವರೆ, ತಾವು ದಯಮಾಡಿ ಇಲ್ಲಿ ಕೇಳಿ. ಈಗಾಗಲೇ ಮಾನ್ಯ ಸಚಿವರು ಸರ್ಕಾರದ ಪರವಾಗಿ ಉತ್ತರವನ್ನು ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾನ್ಯ ಸಚಿವರು ನೀಡಿರತಕ್ಕಂಥ ಉತ್ತರಕ್ಕೆ ಸಂಬಂಧಪಟ್ಟಂತೆ ನಾನು ಕೆಲವು ಸ್ಪಷ್ಟೀಕರಣ ಕೇಳುತ್ತಿದ್ದೇನೆ. ಅವರು ಯಾವುದೇ ಪಕ್ಷಕ್ಕೆ ಸೇರಿರುವುದರಲ್ಲಿ ತಪ್ಪೇನು ಇದೆ ?

ಶ್ರೀ ಎಸ್.ಎಸ್. ಪಾಟೀಲ್ : ಬೇಕಾದ ಪಕ್ಷದವರು ಹೇಳಲಿ. ಆದರೆ, ನಾವು ಮಾತ್ರ ಇದಕ್ಕೆ ಹೋರಾಟ ಮಾಡುತ್ತೇವೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ನಾನು ಕೇಳಿರತಕ್ಕಂಥದಲ್ಲಿ ಏನಾದರೂ ತಪ್ಪಿದ್ದರೆ ನಾನು ಮಾತನಾಡಿರತಕ್ಕಂಥದನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ, ನಾನು ಮಾತನಾಡಿರತಕ್ಕಂಥದ್ದರಲ್ಲಿ ಏನು ತಪ್ಪಿದೆ ಎಂಬುದು ತಮ್ಮ ಮನಸ್ಸಿಗೆ ಅನಿಸಿದರೆ ತಾವು ಏನು ಎನ್ನತಕ್ಕಂಥದ್ದನ್ನು ದಯವಿಟ್ಟು ತಿಳಿಸಬೇಕು.

ಅಧ್ಯಕ್ಷರು : ಯಾವುದೇ ಕಾರಣಕ್ಕೂ ಬಳ್ಳಾರಿಯಾಗಲಿ ಅಥವಾ ಈ ರಾಜ್ಯದ ಯಾವುದೇ ಪ್ರದೇಶವನ್ನು ಬಿಟ್ಟುಕೊಡುವುದಿಲ್ಲವೆಂದು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದಾರೆ. ಆದ್ದರಿಂದ ಈ ವಿಷಯ ಮುಕ್ತಾಯವಾಯಿತು.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ. ಸರ್ಕಾರದ ಕಡೆಯಿಂದ ಅವರಿಗೆ ಪತ್ರ ಬರೆದು ನಮ್ಮ ನಿಲುವನ್ನು ತಿಳಿಸಿದ್ದಾರೆಯೇ ಎಂಬುದರ ಬಗ್ಗೆ ನಾನು ಸೃಷ್ಟೀಕರಣ ಕೇಳುತ್ತಿದ್ದೇನೆ. ಈ ಸಂದರ್ಭದಲ್ಲಿ ನಾನು ಕೇಳತಕ್ಕಂಥ ಪ್ರಶ್ನೆ ಏನೆಂದರೆ.

ಶ್ರೀ ಎಸ್.ಎಸ್. ಪಾಟೀಲ್ : ಪಕ್ಷದ ವಿಷಯವನ್ನು ಇದರಲ್ಲಿ ತರಬಾರದು.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾನ್ಯ ಎಸ್.ಎಸ್. ಪಾಟೀಲ್‌ರವರು ದ್ವಂದ್ವ ನೀತಿಯನ್ನು ಅನುಸರಿಸುತ್ತಿದ್ದಾರೆ. ಅದೇನೆಂದರೆ, ಅವರ ಕಡೆಯಲ್ಲಿ ಯಾರಾದರೂ ಇಂಗ್ಲೀಷ್‌ನಲ್ಲಿ

ಮಾತನಾಡಿದರೆ ಇವರು ಸುಮ್ಮನೆ ಇರುತ್ತಾರೆ, ಆದರೆ, ಈ ಕಡೆಯವರು ಯಾರಾದರೂ ಇಂಗ್ಲಿಷ್‌ನಲ್ಲಿ ಮಾತನಾಡಿದರೆ ಕನ್ನಡದಲ್ಲಿ ಮಾತನಾಡಿ ಎಂದು ಹೇಳುತ್ತಾರೆ. ನೀವು ಹಿರಿಯ ಸದಸ್ಯರಾಗಿದ್ದುಕೊಂಡು ಈ ರೀತಿ ದ್ವಂದ್ವನೀತಿ ಏಕೆ ?

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಕಟ್ಟಾ ಸುಬ್ರಮಣ್ಯ ನಾಯ್ಡುರವರೇ, ಒಂದು ನಿಮಿಷ ಯೀಲ್ಡ್ ಆಗಿ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ : ಕರ್ನಾಟಕ ಮತ್ತು ಬೆಂಗಳೂರನ್ನು ಉಳಿಸಬೇಕಾಗಿದೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಬಳ್ಳಾರಿಯನ್ನು ಆಂಧ್ರಕ್ಕೆ ಬಿಟ್ಟುಬಿಡಿ ಎಂದು ನಾವೇನೂ ಹೇಳುತ್ತಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿ 60 ಪರ್ಸೆಂಟ್ ಹೊರರಾಜ್ಯದವರಿದ್ದು ಕೇವಲ 40 ಪರ್ಸೆಂಟ್‌ನಷ್ಟು ಮಾತ್ರ ಕನ್ನಡದವರಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಎಸ್.ಎಸ್. ಪಾಟೀಲ್‌ರವರು ಬೆಂಗಳೂರನ್ನು ಉಳಿಸಿಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ. ಇವರು ಎಷ್ಟರಮಟ್ಟಿಗೆ ಉಳಿಸಿಕೊಳ್ಳುತ್ತಾರೆ ಎನ್ನುತಕ್ಕಂಥದ್ದು ನಮಗೆ ಗೊತ್ತಿದೆ.

ಅಧ್ಯಕ್ಷರು : ಈ ವಿಷಯದ ಮೇಲಿನ ಚರ್ಚೆಯನ್ನು ಈಗ ಮುಕ್ತಾಯ ಮಾಡೋಣ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, ದಯವಿಟ್ಟು ಎರಡು ನಿಮಿಷ ಅವಕಾಶ ಕೊಡಿ. ಮಾನ್ಯ ಸಚಿವರು ನಾನು ಕೇಳಿರತಕ್ಕಂಥ ಪ್ರಶ್ನೆಗೆ ಸೃಷ್ಟೀಕರಣ ಕೊಡಬೇಕು.

ಅಧ್ಯಕ್ಷರು : ಸಭೆ ನಡೆಯಬೇಕೋ ಅಥವಾ ಬೇಡವೋ ?

ಶ್ರೀ ಎಂ.ಎಸ್. ಸೋಮಲಿಂಗಪ್ಪ : ಮಾನ್ಯ ಅಧ್ಯಕ್ಷರೆ, ಅಲೂರು ಮತ್ತು ಅದ್ವಾನಿ ಪ್ರದೇಶಗಳು ಕರ್ನಾಟಕ ರಾಜ್ಯಕ್ಕೆ ಸೇರಬೇಕೆಂದು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಬೇಕೆಂದು ಮತ್ತು ಇದರ ಬಗ್ಗೆ ಮಾನ್ಯ ಸಚಿವರು ಒಂದು ಹೇಳಿಕೆಯನ್ನು ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಇದು ಸ್ಟೇಟ್ ಇಂಟ್ರೆಸ್ಟ್ ವಿಚಾರ ಎನ್ನುತಕ್ಕಂಥದ್ದು ಮಾನ್ಯ ರಮೇಶ್ ಕುಮಾರ್‌ರವರ ಅಪೀಲ್. ಇಲ್ಲಿ ಯಾರೂ ಕೂಡ ನಮ್ಮ ರಾಜ್ಯದ ಹಿತವನ್ನು ಹೊರಗಡೆ ಬಿಡುವುದಿಲ್ಲ ಮತ್ತು ಅವರೂ ಕೂಡ ಅವರ ರಾಜ್ಯವನ್ನು ಕಾಪಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಈ ವಿಷಯಕ್ಕೆ ಸಂಬಂಧ ಪಟ್ಟಂತೆ ಅವರೇನು ಹೇಳುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆಂದರೆ, ಏನೂ ವಿಷಯವಿಲ್ಲದೆ ರಾಜ್ಯದ ಜನತೆಯಲ್ಲಿ ಗಲಭೆ ಹುಟ್ಟಿಸುವುದಕ್ಕೆ ಪ್ರಯತ್ನ ಮತ್ತು ರಾಜ್ಯಕ್ಕೆ ಬೆಂಕಿ ಇಡುವುದಕ್ಕೆ ಏತಕ್ಕೆ ಪ್ರಯತ್ನ ಮಾಡುತ್ತಿದ್ದೀರಿ ? ಈ ಕೆಲಸ ಬೇಡ. ಜಾತಿ ಮತ್ತು ಧರ್ಮದ ಹೆಸರಿನಲ್ಲಿ ಇಡೀ ರಾಜ್ಯದಲ್ಲಿ ಹಿಂದೆ ಬೆಂಕಿ ಇಟ್ಟಿದ್ದು ಸಾಕು ಮತ್ತೆ ಈ ವಿಚಾರದಲ್ಲಿ ಬೆಂಕಿ ಇಡುವುದಕ್ಕೆ ಹೋಗಬೇಡಿ ಎಂಬುದನ್ನು ಅವರು ಹೇಳಿದ್ದಾರಷ್ಟೆ.

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಕಾಂಗ್ರೆಸ್‌ನವರು ಈ ವಿಷಯ ಪ್ರಸ್ತಾಪ ಮಾಡಿ ಈ ರಾಜ್ಯಕ್ಕೆ ಬೆಂಕಿ ಇಡುವುದಕ್ಕೆ ಹೊರಟಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ರಮೇಶ್ ಕುಮಾರ್‌ರವರು ಹೇಳಿರತಕ್ಕಂಥದ್ದನ್ನು ಮಾನ್ಯ ಡಿ.ಕೆ. ಶಿವಕುಮಾರ್‌ರವರು ಬೇರೆ ರೀತಿಯಲ್ಲಿ ಅರ್ಥ ಮಾಡಿಕೊಂಡಿದ್ದಾರೆ. ಅಂದರೆ, ಈ

ರೀತಿ ಬೆಂಕಿ ಹಚ್ಚುವುದೇ ಅವರ ಕೆಲಸ. ಕಾಂಗ್ರೆಸ್‌ನವರು ಅಲ್ಲಿ ಮತ್ತು ಇಲ್ಲಿಯೂ ಕೂಡ ಬೆಂಕಿ ಹಚ್ಚಿದ್ದಾರೆ. ಈ ರೀತಿ ರಾಜಕಾರಣ ಮಾಡಿಕೊಂಡು. ವೋಟು ತೆಗೆದುಕೊಳ್ಳತಕ್ಕಂಥ ಕೆಲಸ ಅವರು ಮಾಡುತ್ತಾರೆ. ಜಾತಿ ರಾಜಕಾರಣ ಮಾಡಿಕೊಂಡು ವೋಟು ಬ್ಯಾಂಕ್ ತೆಗೆದುಕೊಳ್ಳುವಂಥದ್ದು ಕಾಂಗ್ರೆಸ್ ಪಕ್ಷದ ನೀತಿಯಾಗಿದೆ. ಇದನ್ನು ಬಿಟ್ಟು ಬೇರೇನೂ ಇಲ್ಲ. Divide and rule,

ಅಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರ್‌ರವರೆ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ನಿಯಮಾವಳಿಗಳನ್ನು ಮೀರಿ ನಾವು ಚರ್ಚೆ ಮಾಡುವುದಕ್ಕೆ ಪ್ರಾರಂಭ ಮಾಡಿದರೆ ಈ ಸದನ ಯಾವ ರೀತಿ ಹೋಗುತ್ತದೆ ಎಂಬುದನ್ನು ತಾವು ಯೋಚನೆ ಮಾಡಿ.

ಅಧ್ಯಕ್ಷರು : ನಿಯಮಾವಳಿ ರೀತ್ಯಾ ಚರ್ಚೆ ಮಾಡುವುದಕ್ಕೆ ಇಲ್ಲಿ ಯಾರೂ ಸಿದ್ದರಿಲ್ಲದೇ ಇದ್ದರೆ ನಾನೇನು ಮಾಡಬೇಕೆಂದು ನೀವೇ ಹೇಳಿ ?

ಶ್ರೀ ಎಂ.ಪಿ. ಪ್ರಕಾಶ್ : ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ನಿಯಮ 73ರ ಅಡಿಯಲ್ಲಿ ಚರ್ಚೆ ಮಾಡುತ್ತಿರುವ ವಿಷಯದ ಬಗ್ಗೆ ಚರ್ಚೆಯನ್ನು ಮುಕ್ತಾಯ ಮಾಡಲಾಗಿದೆ ಎಂದು ಹೇಳಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು : ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಇನ್ನು ಸೃಷ್ಟೀಕರಣ ನೀಡಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ನಮ್ಮ ಉತ್ತರನವನ್ನು ಈಗಾಗಲೇ ಹೇಳಿದ್ದೇನೆ. ಮತ್ತೆ ಸೃಷ್ಟೀಕರಣ ಕೂಡ ಆಗಿದೆ. ನಿಯಮಕ್ಕೆ ಸಂಬಂಧವಿಲ್ಲದ ವಿಷಯದ ಬಗ್ಗೆ ಭಾಗವಹಿಸಿದರೆ ಹೇಗೆ ?

ಅಧ್ಯಕ್ಷರು : ಸರ್ಕಾರದ ಉತ್ತರವನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಆದ್ದರಿಂದ ಮಾನ್ಯ ನಾಯ್ಡುರವರೆ, ತಾವು ಕುಳಿತುಕೊಳ್ಳಿ. ಈಗ ಮುಂದಿನ ವಿಷಯಕ್ಕೆ ಹೋಗೋಣ. ಮಾನ್ಯ ಎಂ.ಟಿ. ಕೃಷ್ಣಪ್ಪನವರು ಗಮನ ಸೆಳೆಯುವ ಸೂಚನೆ ಬಗ್ಗೆ ಪ್ರಸ್ತಾಪ ಮಾಡಬೇಕಾಗಿತ್ತು. ಅವರ್ಯಾರೂ ಇಲ್ಲವೆಂದು ಕಾಣುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಮ್ಮದೊಂದು ಹಕ್ಕು ಚ್ಯುತಿ ಇದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ. ಮದುವೆಯ ವಿಚಾರದ ಬಗ್ಗೆ ಬಹಳ ಪ್ರಾಮುಖ್ಯವಾದಂಥ ಒಂದು ಖಾಸಗಿ ನಿರ್ಣಯವನ್ನು ಕಳುಹಿಸಿದ್ದೇನೆ. ಅದರ ಬಗ್ಗೆ ಮಾತನಾಡುವುದಕ್ಕೆ ತಾವು ಅವಕಾಶ ಕೊಡಬೇಕು.

6. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ಇನ್ಸ್‌ಪೆಕ್ಟರ್ ಒಬ್ಬರು ಶಾಸಕರ ಜೊತೆ ಅಸಭ್ಯವಾಗಿ ವರ್ತಿಸಿದ ಬಗ್ಗೆ ; ಹಕ್ಕುಚ್ಯುತಿ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಜಗದೀಶ್ ಶೆಟ್ಟರ್ : ಒಬ್ಬ ಇನ್ಸ್‌ಪೆಕ್ಟರ್ ಶಾಸಕರ ಜೊತೆ ಅಸಭ್ಯವಾಗಿ ವರ್ತನೆ ಮಾಡುತ್ತಿದ್ದಾನೆ. ಇದರಿಂದ ಜನಪ್ರತಿನಿಧಿಯಾಗಿ ಕೆಲಸನವನ್ನು ಸರಿಯಾಗಿ ನಿರ್ವಹಿಸುವುದಕ್ಕೆ ಆಗುತ್ತಿಲ್ಲ. ಆದ್ದರಿಂದ ಮಾನ್ಯ ಕಳಸಪ್ಪ ಗುರುಶಾಂತಪ್ಪ ಬಂಡಿಯವರಿಗೆ ಬಹಳಷ್ಟು ದೌರ್ಜನ್ಯವಾಗಿದೆ. ಆದ್ದರಿಂದ ಈ ವಿಷಯದ ಬಗ್ಗೆ ಅವರು ಪ್ರಸ್ತಾಪ ಮಾಡುವುದಕ್ಕೆ ತಾವು ಅವಕಾಶ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಕಾರ್ಯಾಲಯದಲ್ಲಿ ಕೇಳಿದಾಗ ಇಂದು ಸಂಜೆ 6.00 ಗಂಟೆಯವರೆಗೆ ಇಲ್ಲಿ ಕುಳಿತು ಚರ್ಚೆ ಮಾಡೋಣವೆಂದು ಹೇಳಿದ್ದೀರಿ.